'ತಿಟ ತಿಟ ನಾಗೆ ತಿಟ... ನಾಗೆ ತಿಟ ಕತ ಕತ...'– ಹಿಂದೂಸ್ತಾನಿ ಸಂಗೀತದ ಪ್ರಮುಖ ತಾಳ 'ತೀನ್‌ತಾಲ್'ನಲ್ಲಿ ಬರುವ ಬೋಲ್ ಒಂದರ ತುಣುಕು ಇದು. ಇದೇ ಬೋಲ್ ಅನ್ನು ಕಥಕ್ ನೃತ್ಯದಲ್ಲಿ ತಾಳಬದ್ಧ ನಡೆಯೊಂದಿಗೆ ಪ್ರಸ್ತುತಪಡಿಸಲಾಗುತ್ತದೆ. ಕಥಕ್ ನೃತ್ಯದಲ್ಲಿ ಪಂ. ಬಿರ್ಜು ಮಹಾರಾಜ್ ಅವರದು ವಿಶ್ವವಿಖ್ಯಾತ ಹೆಸರು. ವಿಶ್ವವೇದಿಕೆಯಲ್ಲಿ ಅವರು ನೀಡಿದ ಕಥಕ್ ನೃತ್ಯ ಪ್ರದರ್ಶನ ಲೆಕ್ಕವಿಲ್ಲದಷ್ಟು!

ಪಂ. ಬಿರ್ಜು ಮಹಾರಾಜ್ ಕಥಕ್‌ನ ದಂತಕತೆ. ಇವರ ಪ್ರಯೋಗಶೀಲ ಗುಣ, ಚಿಂತನೆಯ ಲಹರಿ, ನಾದ–ತಾಳದ ಏಕಪ್ರಕಾರ ಅಭಿವ್ಯಕ್ತಿ, ಹೆಜ್ಜೆ–ಗೆಜ್ಜೆಗಳ ಹಿತವಾದ ತಾನ್–ತರಾನ ಪ್ರಸ್ತುತಿ ಇವರ ಕಥಕ್ ನೃತ್ಯದ ವಿಶೇಷ. ಕಥಕ್ ಶೈಲಿಗೆ ಸಂಪೂರ್ಣವಾಗಿ ಆತುಕೊಂಡು ಲಖನೌ ಘರಾಣದಲ್ಲಿ ಹೆಸರುವಾಸಿಯಾದ ಈ ಅದ್ಭುತ ಕಲಾವಿದ ಮುಂದೆ ಲಖನೌ ಕಲ್ಕಾ–ಬಿಂದಾದಿನ್ ಘರಾಣೆ ಎಂಬ ಹೊಸ ಶೈಲಿಯ ಪ್ರತಿಪಾದಕರೂ ಆಗಿದ್ದರು. ಕಥಕ್ ನೃತ್ಯ ಮಾತ್ರವಲ್ಲದೆ ಗಾಯನ, ತಬಲಾ, ಡ್ರಮ್ಸ್ ನುಡಿಸಾಣಿಕೆಯಲ್ಲೂ ಪ್ರವೀಣರಾಗಿದ್ದರು. ಗಾಯನದ ವಿವಿಧ ಪ್ರಕಾರಗಳಾದ ಠುಮ್ರಿ, ದಾದ್ರಾ, ಭಜನ್ ಮತ್ತು ಗಜಲ್‌ಗಳನ್ನು ಸೊಗಸಾಗಿ ಹಾಡಿ ಗಾನ–ನಾಟ್ಯ ಎರಡರಲ್ಲೂ ಅಸಾಧಾರಣ ಪ್ರೌಢಿಮೆ ಸಿದ್ಧಿಸಿಕೊಂಡವರು.

ಇವರ ಮೊದಲ ಹೆಸರು ಬ್ರಿಜ್ ಮೋಹನ್‌ದಾಸ್. ಮಹಾರಾಜ ಇವರ ಮನೆತನದ ಹೆಸರು. ಇದರಿಂದಲೇ ಮುಂದೆ ಬಿರ್ಜು ಮಹಾರಾಜ್ ಎಂದೇ ಖ್ಯಾತರಾದರು. ಉತ್ತರಪ್ರದೇಶದ ಹಾಂಡಿಯಾದಲ್ಲಿ 1937ರ ಫೆಬ್ರುವರಿ 4ರಂದು ಜನಿಸಿದ ಇವರ ಮನೆತನವೇ ಕಥಕ್ ಹಾಗೂ ಸಂಗೀತದ್ದು. ತಂದೆ ಜಗನ್ನಾಥ (ಅಚ್ಚನ್) ಮಹಾರಾಜ್ ಅವರಿಂದ 13ನೆ ವಯಸ್ಸಿಗೇ ನೃತ್ಯ ಕಲಿಯಲಾರಂಭಿಸಿ, ಹದಿಹರೆಯದಲ್ಲೇ ಹಲವಾರು ಕಥಕ್ ನೃತ್ಯ ಪ್ರದರ್ಶನ ನೀಡಿ ಜನಮೆಚ್ಚುಗೆ ಗಳಿಸುವಲ್ಲಿ ಸಫಲರಾದರು.

## ಉತ್ತಮ ಬೋಧಕರು

ಪಂ. ಬಿರ್ಜು ನೃತ್ಯಪಟು ಮಾತ್ರವಲ್ಲದೆ ಉತ್ತಮ ವಾಗ್ಮಿ, ಬೋಧಕರೂ ಆಗಿದ್ದರು. ದೇಶ ವಿದೇಶಗಳಲ್ಲಿ ಹಲವಾರು ನೃತ್ಯ ಕಾರ್ಯಾಗಾರ, ಕಮ್ಮಟ, ಶಿಬಿರಗಳನ್ನು ನಡೆಸಿಕೊಟ್ಟಿದ್ದರು. ಅಮೆರಿಕ, ಯೂರೋಪ್, ಜರ್ಮನಿ, ಸಿಂಗಪುರ, ಮಲೇಶ್ಯಾ ಮುಂತಾದ ದೇಶಗಳಲ್ಲಿ ಇವರ ಕಥಕ್ ನೃತ್ಯ ಹಾಗೂ ಕಮ್ಮಟಗಳು ಬಹಳ ಪ್ರಸಿದ್ಧಿ ಪಡೆದಿದ್ದವು.



ದೆಹಲಿಯ ಭಾರತೀಯ ಕಲಾ ಕೇಂದ್ರ ಹಾಗೂ ಕಥಕ್ ಸಂಸ್ಥೆಯಲ್ಲಿ ನೃತ್ಯ ಗುರುಗಳಾಗಿದ್ದ ಬಿರ್ಜು, ನೃತ್ಯ ಸಂಯೋಜನೆಯಲ್ಲೂ ನುರಿತವರಾಗಿದ್ದರು. 'ಕೇಂದ್ರ ಸಂಗೀತ ನಾಟಕ ಅಕಾಡೆಮಿ'ಯ ಬೋಧಕ ವೃಂದದ ಮುಖ್ಯಸ್ಥರಾಗಿಯೂ ಹಲವಾರು ವರ್ಷ ದುಡಿದಿದ್ದರು. ಇವರು ಕೊರಿಯೊಗ್ರಫಿ ಮಾಡಿದ್ದ 'ವಿಶ್ವರೂಪಂ' (2013) ಅಪಾರ ಜನಪ್ರಿಯತೆ ಗಳಿಸಿತ್ತು.

## ಚಕ್ಕರ್ಸ್ ಚಮತ್ಕಾರ!

ಚಕ್ಕರ್ಸ್ ಕಥಕ್‌ನ ಪ್ರಧಾನ ಆಕರ್ಷಣೆ. ಇದನ್ನು ಮಾಡುವಾಗ ಒಂದು ಫೋಕಸ್ ಪಾಯಿಂಟ್ ಇರಬೇಕು. ಹಿಮ್ಮಡಿಗಳ ಆಧಾರದಿಂದಲೇ ಬುಗುರಿ ತಿರುಗಿದಂತೆ ಬ್ಯಾಲೆನ್ಸ್ ಮಾಡುತ್ತಾ ಅಭಿನಯಿಸಬೇಕು. ಇಲ್ಲಿ ಸಾಕಷ್ಟು ಪರಿಶ್ರಮ, ಉಸಿರು ನಿಯಂತ್ರಣ ಸಾಮರ್ಥ್ಯ ಮುಖ್ಯ. ಕಥಕ್‌ನ 'ಚಕ್ಕರ್ಸ್'ಗಳಲ್ಲಿ ಚಮತ್ಕಾರವನ್ನೇ ಸೃಷ್ಟಿಸುತ್ತಿದ್ದ ಬಿರ್ಜು ಮಹಾರಾಜ್, ಕಥಕ್ ನೃತ್ಯ–ನಾಟಕಗಳನ್ನು ನವೀನ ಶೈಲಿಯಲ್ಲಿ ಸಂಯೋಜಿಸುವುದರ ಮೂಲಕ ಈ ನೃತ್ಯಕಲೆ ಮತ್ತು ಶೈಲಿಯನ್ನು ಇನ್ನಷ್ಟು ಉತ್ತುಂಗಕ್ಕೆ ಕೊಂಡೊಯ್ದವರು. ನೃತ್ಯ ಮಾಡುವಾಗ ತಾಸುಗಟ್ಟಲೆ ಬ್ಯಾಲೆನ್ಸ್ ಮಾಡುತ್ತಾ, ಅಭಿನಯದಲ್ಲೂ ಚಾಕಚಕ್ಯತೆ ತೋರಿಸುತ್ತಿದ್ದ ಇವರ ನೃತ್ಯಶೈಲಿಗೆ ನೋಡುಗರು ಬೆರಗಾಗುತ್ತಿದ್ದರು.

ಕಥಕ್ ಎಂದರೆ ಕಥೆ ಹೇಳುವುದು ಎಂದರ್ಥ. ಕಥಕ್ ನೃತ್ಯ ಬಲವಾಗಿ ಪ್ರತಿಪಾದಿಸುವುದು ರಾಧಾ–ಕೃಷ್ಣರ ಕಥೆಗಳನ್ನು. ಇದಲ್ಲದೆ ರಾಮ–ಸೀತಾ, ಶಿವ–ಪಾರ್ವತಿಯರ ಕಥೆಗಳನ್ನೂ ಕಥಕ್ ನೃತ್ಯದಲ್ಲಿ ಸಂಯೋಜಿಸಿ ಅಭಿನಂದಿಸಿ ಮೋಡಿ ಮಾಡುತ್ತಿದ್ದ ಬಿರ್ಜು ಮಹಾರಾಜ್ ಅವರ ಪರಿ ಸೋಜಿಗ ಹುಟ್ಟಿಸುತ್ತಿತ್ತು.

ಹಿಂದಿ ಸಿನಿಮಾಗಳಿಗೆ ನೃತ್ಯ ಸಂಯೋಜನೆ ಮಾಡಿ, ಹಿನ್ನೆಲೆ ಸಂಗೀತದಲ್ಲೂ ತೊಡಗಿಸಿಕೊಂಡಿದ್ದರು. ಖ್ಯಾತ ನಿರ್ದೇಶಕ ಸತ್ಯಜಿತ್ ರಾಯ್ ಅವರ 'ಶತರಂಜ್ ಕೆ ಖಿಲಾಡಿ' ಸಿನಿಮಾದ (1977) ಎರಡು ನೃತ್ಯಗಳನ್ನು ಸಂಯೋಜಿಸಿದ್ದರು. ಇದೇ ಸಿನಿಮಾಕ್ಕೆ ಕಂಠದಾನವನ್ನೂ ಮಾಡಿದರು. 2002ರಲ್ಲಿ ಶಾರುಕ್ ಖಾನ್ ಅಭಿನಯದ 'ದೇವದಾಸ್' ಸಿನಿಮಾಕ್ಕೂ ನೃತ್ಯ ಸಂಯೋಜನೆ ಮಾಡಿದ್ದರು.

ಕೇಂದ್ರ ಸಂಗೀತ–ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮವಿಭೂಷಣ ಗೌರವಗಳಿಗೆ ಭಾಜನರಾಗಿದ್ದ ಬಿರ್ಜು ಮಹಾರಾಜ್ ಅವರಿಗೆ ಮೂವರು ಪುತ್ರಿಯರು ಹಾಗೂ ಇಬ್ಬರು ಪುತ್ರರು. ದೇಶ ವಿದೇಶಗಳಲ್ಲಿ ಅಪಾರ ಶಿಷ್ಯವರ್ಗವನ್ನು, ಅಭಿಮಾನಿಗಳನ್ನು ಹೊಂದಿರುವ ಬಿರ್ಜು ಇನ್ನು ನೆನಪು ಮಾತ್ರ.

ಬೆಂಗಳೂರಿಗೆ ಬಂದಿದ್ದರು. ಆಗ ನಮ್ಮ ಮನೆಗೂ ಬಂದಿದ್ದರು. ನನ್ನ ಮಗಳು ಆರೋಹಿ ಆಗ ನಾಲ್ಕು ತಿಂಗಳ ಮಗು. ಮಗಳಿಗೆ ಆಶೀರ್ವದಿಸುತ್ತಾ, 'ಇವಳಿಗೂ ಕಥಕ್ ಕಲಿಸು. ನಮ್ಮ ಪರಂಪರೆ ಹಾಗೂ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಿಳಿಸುವುದು ನಮ್ಮ ಕರ್ತವ್ಯವಾಗಬೇಕು. ನಮ್ಮ ದೇಶದಲ್ಲಿರುವಂತಹ ಸುಸಂಸ್ಕೃತ ಶಿಷ್ಟಾಚಾರ ಜಗತ್ತಿನ ಬೇರೆ ಯಾವ ದೇಶದಲ್ಲೂ ಕಾಣಲು ಸಾಧ್ಯವಿಲ್ಲ' ಎಂದಿದ್ದರು. ದೇಶ, ಕಲೆ, ಪರಂಪರೆಯ ಬಗ್ಗೆ ಅವರಿಗಿರುವ ಅಭಿಮಾನ, ಪ್ರೀತಿ ಇದರಿಂದಲೇ ವೇದ್ಯವಾಗುತ್ತದೆ.

**• 'ರಾಧಾ ಕೃಷ್ಣ' ನೃತ್ಯ ರೂಪಕ ಅವರಿಗೆ ಅತ್ಯಂತ ಪ್ರಿಯವಾದದ್ದು ಎಂದಿರಿ. ಈ ನೃತ್ಯದಲ್ಲಿ ನಿಮ್ಮ ಅಭಿನಯದ ಬಗ್ಗೆ ಗುರುಗಳು ಪ್ರಶಂಸಿಸಿದ ಬಗೆ ಹೇಗೆ?**

2018ರಲ್ಲಿ ಬೆಂಗಳೂರಿನಲ್ಲಿ 'ಕಥಕ್ ಯಾತ್ರಾ' ಎಂಬ ಕಥಕ್ ನೃತ್ಯೋತ್ಸವ ನಡೆಯಿತು. ಇಲ್ಲಿ ನಮ್ಮ ಗುರುಗಳು ಕೊರಿಯೊಗ್ರಫಿ ಮಾಡಿದ್ದ 'ರಾಧಾ ಕೃಷ್ಣ' ನೃತ್ಯದಲ್ಲಿ ನಾನು ರಾಧಾ ಪಾತ್ರ ವಹಿಸಿದ್ದೆ. ಕೃಷ್ಣನನ್ನು ಬಹಳ ಪ್ರೀತಿಸುವ ರಾಧಾ ಕೃಷ್ಣನಿಗೆ ತನ್ನ ಸಂಪೂರ್ಣ ಸಮರ್ಪಣಾ ಭಾವವನ್ನು ಪ್ರದರ್ಶಿಸಬೇಕಾದ ಭಾವಪೂರ್ಣ ಸನ್ನಿವೇಶವದು. ನನ್ನ ಪಾತ್ರವನ್ನು ಬಹುವಾಗಿ ಮೆಚ್ಚಿ ಪಂ. ಬಿರ್ಜು ಮಹಾರಾಜ್ ಅವರು ಪ್ರಶಂಸಿಸಿದರು.

**• ಪಂ. ಬಿರ್ಜು ಮಹಾರಾಜ್ ಅವರ ಜೊತೆಗೆ ವೇದಿಕೆಯನ್ನೂ ಹಂಚಿಕೊಂಡಿದ್ದೀರಿ. ಇಂತಹ ಸಂದರ್ಭದಲ್ಲಿ ಎದುರಿಸಿದ ಸವಾಲುಗಳೇನು?**

ಪಂ. ಮಹಾರಾಜ್ ಅವರೊಂದಿಗೆ ನೃತ್ಯ ಮಾಡುವ ಅನೇಕ ಸದವಕಾಶಗಳೂ ನನಗೆ ಸಿಕ್ಕಿವೆ. ಹಿಂದೊಮ್ಮೆ ಪಂ. ಬಿರ್ಜು ಅವರ 70ನೇ ಜನ್ಮದಿನಾಚರಣೆ ಪ್ರಯುಕ್ತ ಅವರ ಜನ್ಮಸ್ಥಳ ಹಾಂಡಿಯಾದಲ್ಲಿ ಕಥಕ್ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಿದ್ದರು. ದೇಶ ವಿದೇಶಗಳ ಅನೇಕ ಪ್ರತಿಭಾನ್ವಿತ ನೃತ್ಯಪಟುಗಳು ಅಲ್ಲಿಗೆ ಬಂದಿದ್ದರು. ಆ ವೇದಿಕೆಯಲ್ಲಿ ನಾನು ಅವರ ಜೊತೆ 70 ಸ್ಪಿನ್ ಇರುವ ವಿಶಿಷ್ಟ ನೃತ್ಯ ಮಾಡಿದ್ದೆ. 'ಕಾಲಚಕ್ರ'ವನ್ನೇ (ಟೈಮ್ ಸೈಕಲ್) ನಿಖರವಾಗಿ ನಿರ್ಧರಿಸುವ ನೃತ್ಯವದು. ಇದನ್ನು ಮಾಡುವುದು ಬಹುದೊಡ್ಡ ಸವಾಲು ಎನಿಸಿತ್ತು.